ತುಂಡುಗಳನ್ನು ನೆಡಬೇಕು. ಮೊದಲನೆಯ ಬೇಸಿಗೆಯ ಕಾಲದಲ್ಲಿ ಪರಿಸರಕ್ಕನುಗುಣವಾಗಿ ನೀರನ್ನು ಒದಗಿಸಬೇಕು. ನಾಟಿ ಮಾಡಿದ ಮೊದಲನೇ ವರ್ಷದ ಅವಧಿಯಲ್ಲಿ ಸಸಿಗಳನ್ನು ಬೆಂಕಿ ಮತ್ತು ಸಾಕುಪ್ರಾಣಿಗಳ ಉಪಟಳದಿಂದ ರಕ್ಷಿಸುವುದು ಅಗತ್ಯ.

ಅಚಿತರ ಬೆಳೆ:– ತೋಟಗಳಲ್ಲಿ ಹಾಗೂ ನಡುತೋಪುಗಳ'ಲ್ಲಿ ರೈತರು ಹೆಬ್ಬೇವನ್ನು ಹಿಪ್ಪುನೇರಳೆ, ತೇಗ, ಬೇವು, ಸಿಲ್ವರ್ ಮರ ಹಾಗೂ ಇನ್ನಿತರ ಮರದೊಂದಿಗೆ ಬೆಳೆಯುತ್ತಾರೆ. ಅಲ್ಲದೆ ಹಣ್ಣಿನ ಬೆಳೆಗಳಾದ ತೆಂಗು, ಮಾವು, ಸಪೋಟಾ, ಬಾಳೆ ಬೆಳೆಗಳಲ್ಲಿ ಸಹ ಅಂತರ ಬೆಳೆಯಾಗಿ ಅಳವಡಿಸಿಕೊಳ್ಳಬಹುದು.

**ಬೆಳವಣಿಗೆ ಮತ್ತು ಇಳುವರಿ:–**

ಹೆಬ್ಬೇವು ಒಂದು ವೇಗವಾಗಿ ಬೆಳೆಯಬಲ್ಲ ಮರವಾಗಿದ್ದು ಹಚ್ಚಿದ 7 ವರ್ಷಗಳಲ್ಲಿ 14 ಮೀ ಎತ್ತರ 112 ಸೆಂ ಮೀ ಸುತ್ತಳತೆ ಹೊಂದುತ್ತದೆ. ಹೆಬ್ಬೇವು ಮರವು ವಾರ್ಷಿಕ ಸರಾಸರಿ 0.035 ಘ.ಮೀ ಮತ್ತು 0.026 ಘ.ಮೀ ಮರಮಟ್ಟನ್ನು ಕ್ರಮವಾಗಿ ನೀರಾವರಿ ಮತ್ತು ಮಳೆಯಾಧಾರಿತ ಪ್ರದೇಶದಲ್ಲಿ ಉತ್ಪಾದಿಸುವುದು ಇದೇ ರೀತಿಯಲ್ಲಿ ಒಂದು ಮರವು 10–12 ವರ್ಷದಲ್ಲಿ ಸರಾಸರಿ 14 ಘನ ಅಡಿಯಷ್ಟು ಮರಮಟ್ಟು ಉತ್ಪಾದಿಸುವುದು. ಹೆಬ್ಬೇವು ಮರದ ಮರಮಟ್ಟು ಈಗಾ ಮಾರುಕಟ್ಟೆಯ ಬೆಲೆಯಲ್ಲಿ ಒಂದು ಘನ ಅಡಿಗೆ ರೂ 400–450 ಇರುತ್ತದೆ.

| ಪದ್ಧತಿ | ಅಂತರ (ಮೀ) | ಒಟ್ಟು ಮರಗಳ ಸಂಖ್ಯೆ / ಹೆಕ್ಟೇರ್ | 10 ವರ್ಷದ ನಂತರ ಶೇ 80 ರ ಮರಗಳ ಸಂಖ್ಯೆ | ಒಟ್ಟು ಘನ ಅಡಿ ಉತ್ಪಾದನೆ | ಒಟ್ಟು ಆದಾಯ ( ರೂ.ಗಳಲ್ಲಿ) |
|---|---|---|---|---|---|
| ಕೃಷಿ ಅರಣ್ಯ ಪದ್ಧತಿಯ ಬದಿ ನೆಡುವಿಕೆ | 4 | 125 | 100 | 1400 | 5.60.000 |
| ನೆಡುತೋಪು | 6 x 4 | 416 | 330 | 4620 | 18.48.000 |

ಶೀಘ್ರವಾಗಿ ಹಾಗೂ ಕಡಿಮೆ ಖರ್ಚಿನಲ್ಲಿ ಬೆಳೆಯುವ ಹೆಬ್ಬೇವು ಮರವನ್ನು ರೈತಾಪಿ ವರ್ಗ ತಮ್ಮ ಜಮೀನುಗಳಲ್ಲಿ / ತೋಟಗಳಲ್ಲಿ ಬೆಳೆಸಿದರೆ ಅದು ಉತ್ತಮ ಫಸಲು ನೀಡಿ ಹೆಚ್ಚು ಆದಾಯ ತಂದು ಕೊಡುವುದರ ಜೊತೆಗೆ ಬೆಳೆ ಹಾನಿ ಸಂದರ್ಭಗಳಲ್ಲಿ ಹಣ ವಿಮೆಯಂತೆ ವರ್ತಿಸುತ್ತದೆ.

ಕನ್ನಿಕಾ ಪ್ರೆಸ್, 9241489615

ಆದ್ದರಿಂದ ಹೆಬ್ಬೇವಿನ ಕೃಷಿ ಬಡ ರೈತರ ಆರ್ಥಿಕ ಸುಧಾರಣೆಯಾಗಲು ಒಂದು ವರದಾನವಾಗಿ ಪರಿಣಮಿಸಿದೆ. ಹೆಬ್ಬೇವಿನ ಉತ್ತಮ ಬೀಜ ಹಾಗೂ ಸಸಿಗಳಿಗಾಗಿ ಈ ಕೆಳಕಂಡ ವ್ಯಕ್ತಿಗಳನ್ನು ಸಂಪರ್ಕಿಸಬಹುದು

1. ಶ್ರೀ ಶಿವಲಿಂಗ ಡಿ. ಮೈಸೂರು,
   ಮೊಬೈಲ್ ಸಂಖ್ಯೆ–9880547573
2. ಶ್ರೀ ರಘುನಾಥ, ಹಿರೀಯೂರು,
   ಮೊಬೈಲ್ ಸಂಖ್ಯೆ –9945003993
3. ಹುನ್ಸಫ್ಲೈ, ಹುನಸೂರ,
   ದೂ.ಸಂಖ್ಯೆ : (0822) 252025, 252860, 253379

ಆಧಾರ: ಪ್ರಾದೇಶಿಕ ಕೇಂದ್ರ, ರಾಷ್ಟ್ರೀಯ ಅರಣ್ಯೀಕರಣ ಮತ್ತು ಪರಿಸರ ಅಭಿವೃದ್ಧಿ ಮಂಡಳಿ, ಕೃಷಿ ವಿಶ್ವವಿದ್ಯಾಲಯ ಜಿ.ಕೆ.ವಿ.ಕೆ. ಬೆಂಗಳೂರು–56.

**ಲೇಖಕರು:**

ಶ್ರೀ ಸಿದ್ದಪ್ಪ ಕನ್ನೂರು
ಶ್ರೀ ಶಿವಶಂಕರಮೂರ್ತಿ ಎಂ
ಡಾ. ರೂಪಾ ಎಸ್ ಪಾಟೀಲ
ಕು.ಅಕ್ಕಮಹಾದೇವಿ ಡಿ. ಅಗಸಿಮನಿ
ಡಾ. ಪ್ರವೀಣ ಗೊರೋಜಿ
ಶ್ರೀ ಕೃಷ್ಣಮೂರ್ತಿ ಹೆಗಡೆ

**ಪ್ರಕಾಶಕರು:**

ಕಾರ್ಯಕ್ರಮ ಸಂಯೋಜಕರು,
ಕೃಷಿ ವಿಜ್ಞಾನ ಕೇಂದ್ರ, ಉತ್ತರಕನ್ನಡ ಶಿರಸಿ

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ**

**ಕೃಷಿ ವಿಜ್ಞಾನ ಕೇಂದ್ರ, ಉತ್ತರ ಕನ್ನಡ**

ಬನವಾಸಿ ರಸ್ತೆ, ಶಿರಸಿ 581401
ಉತ್ತರಕನ್ನಡ ಜಿಲ್ಲೆ
ದೂರವಾಣಿ: 08384–228411
ಮಿಂಚಂಚೆ : kvkuks@gmail.com
ಅಂತರ್ಜಾಲ ತಾಣ : www.kvkuttarakannada.org

ಪ್ರತಿಗಳು 500 ಫೆಬ್ರುವರಿ 2015

**ಕೃಷಿ ವಿಶ್ವವಿದ್ಯಾಲಯ ಧಾರವಾಡ**

**ಕೃಷಿ ವಿಜ್ಞಾನ ಕೇಂದ್ರ, ಉತ್ತರಕನ್ನಡ, ಶಿರಸಿ**

# ಹೆಬ್ಬೇವಿನ ಕೃಷಿ ಬಡರೈತರ ಆಶಾಕಿರಣ

**ಪೀಠಿಕೆ:–**

ಉತ್ತರ ಕನ್ನಡ ಜಿಲ್ಲೆಯ ಜೀವ ವೈವಿಧ್ಯತೆಯ ತಾಣವಾಗಿದ್ದು ಕರಾವಳಿ ಮಲೆನಾಡು ಮತ್ತು ಅರೆಮಲೆನಾಡು ಭೂಪ್ರದೇಶವನ್ನು ಹೊಂದಿದೆ. ಜಿಲ್ಲೆಯ 11 ತಾಲೂಕುಗಳಲ್ಲಿ, ಮುಂಡಗೋಡ ಮತ್ತು ಹಳಿಯಾಳ ತಾಲೂಕುಗಳು ಅರೆಮಲೆನಾಡು ಪ್ರದೇಶಕ್ಕೆ ಸೇರಲ್ಪಡುತ್ತವೆ. ಕರಾ'ವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ತೆಂಗು ಹಾಗೂ ಅಡಿಕೆ ಆಧಾರಿತ ಕೃಷಿ ಪದ್ಧತಿಗಳು ಪ್ರಮುಖವಾದರೆ, ಅರೆಮಲೆನಾಡಿನಲ್ಲಿ ಮಾವು , ಭತ್ತ, ಹತ್ತಿ, ಗೋವಿನಜೋಳ, ನೀರಾವರಿ ಆಶ್ರಯದಲ್ಲಿ ಕಬ್ಬು ಕಲ್ಲಂಗಡಿ ಇನ್ನಿತರ ಬೆಳೆಗಳು ಮುಖ್ಯವಾದವು. ಈ ಪ್ರದೇಶದ ಸರಾಸರಿ ಮಳೆ ಪ್ರಮಾಣ 1300 ಮಿ ಮಿ. ವೇಗವಾಗಿ ಬದಲಾಗುತ್ತಿರುವ ತಾಂತ್ರಿಕತೆ ಹಾಗೂ ಜೀವನ ಶೈಲಿಯಿಂದ ನೈಸರ್ಗಿಕ ವಸ್ತುಗಳು ಅಧಿಕ ಪ್ರಮಾಣದಲ್ಲಿ ನಶಿಸಿ ಹೋಗುತ್ತಿರುವುದರಿಂದ ವಾತಾವರಣದಲ್ಲಿ ಏರುಪೇರುಗಳುಂಟಾಗಿ ಮಳೆ ಮತ್ತು ಬೆಳೆಗಳ ಮೇಲೆ ಪ್ರತಿಕೂಲ ಪರಿಣಾಮ ಉಂಟುಮಾಡುತ್ತಿವೆ. ಆದ್ದರಿಂದ ಈಗಿರುವ ಅರಣ್ಯಗಳನ್ನು ಸಂರಕ್ಷಿಸುವುದರ ಜೊತೆಗೆ ಇನ್ನೂ ಹೆಚ್ಚಿನ ಮರಗಳನ್ನು ಹೊಲದ ಬದುಗಳ ಮೇಲೆ, ವಿವಿಧ ಕೃಷಿ ಅರಣ್ಯ ಪದ್ಧತಿಗಳಲ್ಲಿ, ಪಾಳು ಬಿದ್ದ ಜಮೀನುಗಳಲ್ಲಿ ಬೆಳೆಸುವ ಮೂಲಕ ಪರಿಸರ ಸಮತೋಲನವನ್ನು ಕಾಪಾಡುವ ಕುರಿತು ತಿಳಿವಳಿಕೆ ನೀಡಬೇಕಾಗಿದೆ.

ಹೆಬ್ಬೇವು ಒಂದು ಎಲೆ ಉದುರುವ ಹಾಗೂ ಶೀಘ್ರವಾಗಿ ಬೆಳವಣಿಗೆ ಹೊಂದುವ ಸ್ಥಳೀಯ ದೊಡ್ಡ ಮರವಾಗಿದ್ದು, ಸುಮಾರು 25–30 ಮೀ ಎತ್ತರ ಹಾಗೂ 1 ರಿಂದ 1.5 ಮೀ ಸುತ್ತಳತೆ ಹೊಂದುತ್ತದೆ. ತೊಗಟೆಯು ಕಂದು ಬಣ್ಣದಾಗಿದ್ದು, ಎಲೆಗಳು ದ್ವಿ ಅಥವಾ ತ್ರೀ ಗರಿ ರೂಪ ಸಂಯುಕ್ತವಾಗಿದ್ದು ರೆಂಬೆಯ ತುದಿಗಳಲ್ಲಿ ಗುಂಪಾಗಿರುತ್ತದೆ. ಮರವು ನವೆಂಬರ್ ತಿಂಗಳಿಂದ ಜನೇವರಿ ತಿಂಗಳವರೆಗೆ ಎಲೆರಹಿತವಾಗಿದ್ದು, ಜನೇವರಿ–ಪೆಬ್ರುವರಿ ತಿಂಗಳಲ್ಲಿ ಹೊಸ ಎಲೆಯೊಂದಿಗೆ ಹೂ ಬಿಡಲು ಪ್ರಾರಂಭಿಸುತ್ತದ' ಹೂಗಳು ಸಣ್ಣದಾಗಿದ್ದು ಹಸಿರು ಮಿಶ್ರಿತ ಬೆಳ್ಳಗಿರುತ್ತವೆ. ಮಾರ್ಚ–ಎಪ್ರಿಲ್ ತಿಂಗಳಲ್ಲಿ ಕಾಯಿ ಬಿಡಲು ಪ್ರಾರಂಭಿಸಿ, ಸುಮಾರು ಹತ್ತು ತಿಂಗಳ ನಂತರ ಅಂದರೆ ಮುಂದಿನ ಜನೇವರಿ ತಿಂಗಳಲ್ಲಿ ಮಾಗುತ್ತವೆ.

**ಉಪಯೋಗಗಳು:–**

ಮರವು ದಟ್ಟವಾದ ಹಸಿರು ಎಲೆಗಳನ್ನು ಉತ್ಪಾದಿಸುವುದರಿಂದ ಈ ಎಲೆಗಳು ಬೇಸಿಗೆಯಲ್ಲಿ ಉದುರಿ ಮಣ್ಣಿನಲ್ಲಿ ಸೇರಿ ಸೂಕ್ಷ್ಮಾಣು ಜೀವಿಗಳ ಕ್ರಿಯೆಗಳಿಂದ ಮಣ್ಣಿನ ಫಲವತ್ತತೆ ಹೆಚ್ಚಿಸುತ್ತವೆ. ಆದ್ದರಿಂದ ಕೆಳದರ್ಜೆಯ ಮಣ್ಣುಗಳ ಫಲವತ್ತತೆ ಹೆಚ್ಚಿಸಲು ಇದು ತುಂಬಾ ಸೂಕ್ತವಾದ ಮರ. ಹೆಬ್ಬೇವು ಶೀಘ್ರವಾಗಿ ಬೆಳೆಯುವ ಕಾರಣ ಹಾಗೂ ಇದು ಉತ್ತಮ ಉರಿಯುವ ಗುಣ (5043–5176 ಕ್ಯಾಲೋರಿ) ಇರುವುದರಿಂದ ಉತ್ತಮವಾದ ಉರುವಲು/ಸೌದೆ ಗಿಡವಾಗಿದೆ. ಹೆಬ್ಬೇವು ಗೆದ್ದಲು ನಿರೋದಕ, ಪುನಃ ತಿರಳು ಉಪಯೋಗ ಹಾಗೂ ವಿಶೇಷ ನಾರು ಶಕ್ತಿ ಗುಣಗಳಿಂದ ಕಾಗದ ಮತ್ತು ಪ್ಲೈವುಡ್ ಕಾರ್ಖಾನೆಗಳಿಗೆ ಅಚ್ಚುಮೆಚ್ಚಿನ ಮರವಾಗಿದೆ. 12 ರಿಂದ 15 ವರ್ಷದ ಮರಮಟ್ಟುವನ್ನು ಮನೆಯ ಬಾಗಿಲು, ಕಿಟಕಿ, ಕೃಷಿ ಉಪಕರಣಗಳ ತಯಾರಿಕೆ ಮತ್ತು ಸಲಕರಣೆಗಳ ಹಿಡಿಗಳನ್ನು ತಯಾರಿಸಲು ಬಳಸುವರು. ಇದರ ಮರಮುಟ್ಟು ತುಂಬಾ ಹಗುರ ಹಾಗೂ ನೇರವಾಗಿರುವುದರಿಂದ ಇದನ್ನು ಸಿಗಾರ ಬಾಕ್ಸ್, ಪೆನ್ಸಿಲ್, ಬೆಂಕಿಪೆಟ್ಟಿಗೆ, ಚಹಾ ಪೆಟ್ಟಿಗೆ ಪ್ಲೈವುಡ್ ಹಾಗೂ ಚಿಪ್ಪು ಹಲಗೆ ತಯಾರಿಕೆಗೆ ತುಂಬಾ ಸೂಕ್ತವಾದ ಮರ. ಬೇಸಿಗೆಯ ಸಮಯದಲ್ಲಿ ಹೆಬ್ಬೇವಿನ ದಟ್ಟ ಹಸಿರಿನ ಸೊಪ್ಪನ್ನು ದನಕರುಗಳಿಗೆ ಹಾಗೂ ಮೇಕೆ ಕುರಿಗಳಿಗೆ ಪೂರಕವಾಗಿ ತಿನಿಸುವುದರಿಂದ ಮೇವಿನ ಕೊರತೆಯನ್ನು ನೀಗಿಸಲು ಉಪಯೋಗಕಾರಿಯಾಗಿದೆ. ಇತ್ತೀಚಿನ ದಿನಗಳಲ್ಲಿ ಕಾಗದದ ಕಚ್ಚಾವಸ್ತುವಾದ ಬಿದಿರು ಕಾಗದ ಕಾರ್ಖಾನೆಗಳಿಗೆ ಸೂಕ್ತವಾಗಿ ಸಿಗದಿದ್ದ ಕಾರಣ ಇದನ್ನು ಕಾಗದ ಕಚ್ಚಾವಸ್ತುವಾಗಿ ಉಪಯೋಗಿಸುತ್ತಿದ್ದಾರೆ.

**ವಿತರಣೆ:–**

ಹೆಬ್ಬೇವುನ್ನು ವೈಜ್ಞಾನಿಕವಾಗಿ ಮೇಲಿಯಾ ದುಬಿಯಾ ಎಂದು ಕರೆಯುತ್ತಾರೆ. ಇದು ಮೇಲಿಯೇಸಿ ಕುಟುಂಬದ ಒಂದು ಅತ್ಯಂತ ಪ್ರಮುಖವಾದ ಮರವಾಗಿದ್ದು, ಕನ್ನಡದಲ್ಲಿ ತುರುಬೇವು ಅಥವಾ ಹೆಬ್ಬೇವು, ಕಾಡುಬೇವು ಆಂಗ್ಲ ಭಾಷೆಯಲ್ಲಿ ಮಲಬಾರ್ ನೀಮ್, ತಮಿಳಿನಲ್ಲಿ ಮಲಯವೆಂಬು ಹಾಗೂ ವಾಣಿಜ್ಯ ಉದ್ದೇಶಕ್ಕಾಗಿ ಮಲಬಾಲ್ ನೀಮ್ ವುಡ್ ಎಂದು ಪ್ರಚಲಿತವಾಗಿದೆ.

ಹೆಬ್ಬೇವು ಮೂಲತಃ ಫಿಲಿಫೈನ್ಸ್ ದೇಶವಾಗಿದ್ದು, ಶ್ರೀಲಂಕ, ಭರ್ಮಾ, ಆಸ್ಟೇಲಿಯಾ, ಆಫ್ರಿಕಾ ಮತ್ತು ಭಾರತದಲ್ಲಿ ಕಂಡುಬರುತ್ತದೆ. ಕರ್ನಾಟಕದಲ್ಲಿ ಇದು ಒಣ ಖುಷ್ಕಿ ಪ್ರದೇಶಗಳಾದ ಚಿತ್ರದುರ್ಗ, ಬಳ್ಳಾರಿ, ತುಮಕೂರು, ಚಿಕ್ಕಬಳ್ಳಾಪುರ, ರಾಮನಗರ, ಬೆಂಗಳೂರು ಗ್ರಾಮಾಂತರ, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಕಾಣಸಿಗುತ್ತವೆ. ಇತ್ತೀಚಿಗೆ ರಾಯಚೂರು ಕೊಪ್ಪಳ ಹಾಗೂ ಹಾವೇರಿ ಒಣ ಪ್ರದೇಶಗಳಲ್ಲಿ ರೈತರು ಹೆಬ್ಬೇವು ಮರದ ಕೃಷಿಯನ್ನು ಕೈಗೊಳ್ಳುತ್ತಿದ್ದಾರೆ.

**ಸೂಕ್ತ ಪರಿಸರ;–**

ಹೆಬ್ಬೇವು ಒಣ ಪ್ರದೇಶದಲ್ಲಿ' ಚನ್ನಾಗಿ ಬೆಳೆಯುವುದರಿಂದ ಕಡಿಮೆ ಮಳೆ ಬೀಳುವ ಪ್ರದೇಶಗಳು ಇದರ ಬೆಳೆಗೆ ಸೂಕ್ತವಾಗಿದೆ. ಇದನ್ನು ಹೊಲಗದ್ದೆ ಅಂಚಿನಲ್ಲಿ ಕೃಷಿ ಅರಣ್ಯ ಪದ್ಧತಿಯಲ್ಲಿ ಅಳವಡಿಸಿಕೊಂಡು ಬೆಳೆಯಲು ಒಂದು ಉತ್ತಮ ಮರ, ಅಲ್ಪ ಫಲವತ್ತತೆಯುಳ್ಳ ಗುಡ್ಡಗಾಡು ಪ್ರದೇಶಗಳಲ್ಲಿ ಹಾಗು ಹೆಚ್ಚು ಹವಾಮಾನ ವೈಪರಿತ್ಯವಿರುವ ಪ್ರದೇಶಗಳು ಇದರ ಬೆಳವಣಿಗೆಗೆ ಯೋಗ್ಯವಾಗಿರುವುದರಿಂದ ವ್ಯವಸಾಯಕ್ಕೆ ಯೋಗ್ಯವಲ್ಲದ ಭೂಮಿಗಳಾದ ಬಂಜರು ಭೂಮಿ, ಇಳಿಜಾರು ಪ್ರದೇಶಗಳಲ್ಲಿ ಹಾಗೂ ಸರಕಾರಿ ಜಮೀನುಗಳಲ್ಲಿ ಅರಣ್ಯ ಪ್ರದೇಶಗಳಲ್ಲಿ ನಡುತೋಪುಗಳನ್ನು ಬೆಳೆಸಲು ಉಪಯೋಗಿಸುತ್ತಾರೆ.

**ವೃಕ್ಷ ವೃಧ್ಧಿ ಲಕ್ಷಣಗಳು :–**

ಹೆಬ್ಬೇವು ಹೆಚ್ಚು ಬೆಳಕು ಅಪೇಕ್ಷಿಸುವ ಮರವಾಗಿದ್ದು, ನೆರಳು, ಬೆಂಕಿ ಹಾಗು ಚಿಗುರು ಮೇಯುವ ಉಪಟಳಗಳನ್ನು ಸಹಿಸಿಕೊಳ್ಳುವುದಿಲ್ಲ. ಎಲ್ಲಾ ಬಗೆಯ ಮಣ್ಣುಗಳಲ್ಲಿ ಬೆಳೆಯುತ್ತಿದೆಯಾದರೂ ಫಲವತ್ತಾದ ಮರಳುಯುತ ಗೋಡು ಮಣ್ಣಿನಲ್ಲಿ ಇದರ ಬೆಳವಣಿಗೆ ಉತ್ತೇಜನಕಾರಿಯಾಗಿದೆ.

**ಸಸಿಗಳ ತಯಾರಿಕೆ ;–**

ಹೆಬ್ಬೇವು ಮರವನ್ನು ಬೀಜ ಕಾಂಡದ ತುಂಡುಗಳಿಂದ (Cuttings) ಪುನರುತ್ಪತ್ತಿ ಮಾಡಬಹುದು, ಜನೇವರಿ ತಿಂಗಳಲ್ಲಿ ಹಣ್ಣುಗಳನ್ನು ಸಂಗ್ರಹಿಸಿ ಉಪಚರಿಸಿ ಸಸಿಗಳನ್ನು ಬೆಳೆಯಬಹುದು. ಆದರೆ ಮೊಳಕೆಯ ಪ್ರಮಾಣ ತುಂಬಾ ಕಡಿಮೆ (10 ರಿಂದ 15 %) ಇದೆ. ಜಾನುವಾರಗಳ ಸಗಣಿಯಿಂದ 4–5 ದಿನಗಳ ಕಾಲ ಉಪಚರಿಸಿದರೆ ಅಥವಾ 24 ಗಂಟೆ ನೀರಿನಲ್ಲಿ ನೆನೆಸಿ ನಂತರ 4–5 ದಿನ ಗಾಳಿ ರಹಿತ ಪ್ಲಾಸ್ಟಿಕ ಚೀಲಗಳಲ್ಲಿ ಶೇಖರಿಸಿ ನಂತರ ಉಪಯೋಗಿಸಿದರೆ ಮೊಳಕೆಯ ಪ್ರಮಾಣ (30 ರಿಂದ 40%) ಹೆಚ್ಚಾಗುವುದೆಂದು ಅಧ್ಯಯನಗಳಿಂದ ತಿಳಿದು ಬಂದಿದೆ. ಜಾನುವಾರುಗಳ ಸಗಣಿಯಿಂದ ಸ್ವಾಭಾವಿಕವಾಗಿ ಉಪಚರಿಸಲ್ಪಟ್ಟ ಬೀಜಗಳಿಂದ ಹಾಗೂ ಮರದ ಕೆಳಗೆ ಬೀಜ ಉದುರಿ ಬೆಳೆದ ಸಸಿಗಳನ್ನು ಹಾಗೂ ಗೊಬ್ಬರದ ಗುಂಡಿಯಲ್ಲಿ ಸ್ವಾಭಾವಿಕವಾಗಿ ಬೆಳೆದ ಸಸಿಗಳನ್ನು ನೇರವಾಗಿ ತಂದು ನೆಡಬಹುದು. ಉತ್ತಮವಾಗಿ ಬೆಳೆದ ಮರಗಳಿಂದ 30–40 ಸೆಂ ಮೀ ತುಂಡುಗಳನ್ನು ತಯಾರಿಸಿ, ಸಂಗ್ರಹಿಸಿ ನೇರವಾಗಿ ತೋಟಗಳ ಬದುವಿನ ಮೇಲೆ ಹಾಗೂ ನಡುತೋಪುಗಳಲ್ಲಿ ಕ್ರಮವಾಗಿ 4 ಮೀ ಮತ್ತು 6 x 4 ಮೀ ಅಂತರದಲ್ಲಿ ಬೆಳೆಸಬಹುದು.

**ನೆಡುವ ವಿಧಾನ:–**

50 ಘನ ಸೆಂ ಮೀ ಗುಂಡಿಗಳನ್ನು 4 ಮೀ ಅಥವಾ 6 x 4 ಮೀ ಅಂತರದಲ್ಲಿ ತೆಗೆದು ಭೂಮಿಯ ಮೇಲ್ಮಣ್ಣು ಹಾಗೂ ಕೊಟ್ಟಿಗೆ ಗೊಬ್ಬರ ಸಮ ಪ್ರಮಾಣ ಮಿಶ್ರಣದಿಂದ ತುಂಬಬೇಕು. ಒಂದೆರಡು ಮಳೆ ಆದ ಮೇಲೆ ಗುಂಡಿಗಳ ಮಧ್ಯ ಭಾಗದಲ್ಲಿ ಸಸಿ ಅಥವಾ